ಅ) ಈ ರೀತಿ ನೌಕರರು ಅದೇ ಊರಿನವರಾಗಿರುವ ಕಾರಣದಿಂದ ಸ್ವಹಿತಾಸಕ್ತಿ ಬೆಳೆಸಿಕೊಳ್ಳಲು ಅವಕಾಶವಾಗುವುದಿಲ್ಲವೆ;

ಇ) ಇವರನ್ನು ಅದೇ ತಾಲ್ಲೂಕಿನ ಒಳಗೆ ಬೇರೆ ಪಂಚಾಯಿತಿಗಳಿಗೆ ವರ್ಗಾವಣೆ ಮಾಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸುವ ಇಚ್ಛೆ ಸರ್ಕಾರಕ್ಕೆ ಇದೆಯೆ;

ಈ) ಗ್ರಾಮ ಪಂಚಾಯಿತಿ ಆಡಳಿತವನ್ನು ಉತ್ತಮಪಡಿಸಲು ಇನ್ನೂ ಹೆಚ್ಚಿನ ಕ್ರಮಗಳ ಅವಶ್ಯಕತೆ ಇದೆ ಎಂಬುದು ಸರ್ಕಾರಕ್ಕೆ ಮನವರಿಕೆಯಾಗಿದೆಯೆ;

ಉ) ಹೌದಾದರೆ ಇದನ್ನು ಎಂದಿನಿಂದ ಜಾರಿಗೊಳಿಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್) :—

ಅ) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೯೩ ಉಪಪ್ರಕರಣ ೧೧೩ರನ್ವಯ ೧೧೧ನೇ ಮತ್ತು ೧೧೨ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟು ಗ್ರಾಮ ಪಂಚಾಯಿತಿಯ ಇತರ ನೌಕರರನ್ನು ನೇಮಕ ಮಾಡಿಕೊಳ್ಳಬಹುದು ಮತ್ತು ಗ್ರಾಮ ಪಂಚಾಯಿತಿಯ ನಿಧಿಯಿಂದ ಅವರ ಸಂಬಳವನ್ನು ಸಂದಾಯ ಮಾಡುವ ಅವಕಾಶ ಕಲ್ಪಿಸಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಗ್ರಾಮ ಪಂಚಾಯಿತಿ ನೌಕರರು ಸ್ಥಳೀಯ ನೌಕರರಾಗಿರುವುದರಿಂದ ಇವರುಗಳನ್ನು ಒಂದು ಪಂಚಾಯಿತಿಯಿಂದ ಇನ್ನೊಂದು ಪಂಚಾಯಿತಿಗೆ ವರ್ಗಾವಣೆ ಮಾಡಲು ಬರುವುದಿಲ್ಲ.

ಈ) ಹೌದು.

ಉ) ಈ ಬಗ್ಗೆ ತಜ್ಞರ ಸಮಿತಿಯನ್ನು (Working Group) ರಚಿಸಲಾಗಿದ್ದು ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು.

ಹೂವಿನ ಹಡಗಲಿ ತಾಲ್ಲೂಕಿನ ಕತ್ತೆಬೆನ್ನೂರು ಇನ್ನಿತರ ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ಕುಡಿಯುವ ನೀರಿನ ಯೋಜನೆ.

2538(3337) ಶ್ರೀ ಹಾಲಪ್ಪ ವಿ.ಬಿ. (ಹಡಗಲಿ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಕತ್ತೆಬೆನ್ನೂರು ಗ್ರಾಮಕ್ಕೆ ತುಂಗಭದ್ರ ನದಿಯಿಂದ ಕುಡಿಯುವ ನೀರಿನ ಯೋಜನೆಯ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದುದೆಯೇ; ಹಾಗಿದಲ್ಲಿ, ಸರ್ಕಾರದ ಮುಂದಿನ ಕ್ರಮವೇನು;

ಆ. ಹೂವಿನ ಹಡಗಲಿ ತಾಲ್ಲೂಕಿನ ಇದೇ ಯೋಜನೆಗೆ ಜಿಲ್ಲಾ ಪಂಚಾಯಿತಿ ವತಿಯಿಂದ ಎಷ್ಟು ಗ್ರಾಮಗಳ ಪ್ರಸ್ತಾವನೆ ಸರ್ಕಾರಕ್ಕೆ ಬಂದಿರುತ್ತದೆ; ಆ ಗ್ರಾಮಗಳಾವುವು; ಹಾಗಿದ್ದಲ್ಲಿ, ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಎಂ.ವೈ. ಘೋರ್ಪಡೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್) :—

ಅ) ಕತ್ತೆಬೆನ್ನೂರು ಗ್ರಾಮಕ್ಕೆ ತುಂಗಭದ್ರ ನದಿಯಿಂದ ನೀರು ಪೂರೈಕೆಗಾಗಿ ರೂ.೯೯.೦೦ ಲಕ್ಷ ಮೊತ್ತದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಅಂದಾಜಿಪಟ್ಟಿಯು ತಾಂತ್ರಿಕ ಪರಿಶೀಲನೆಯಲ್ಲಿದೆ.

ಆ) ಹೂವಿನ ಹಡಗಲಿ ತಾಲ್ಲೂಕಿನ (೧) ಸೊದೇನಹಳ್ಳಿ (೨) ಕಾಲ್ವಿತಾಂಡಾ (೩) ಅಂಕ್ಲಿ ಮತ್ತು (೪) ಹಿರೇಮಲ್ಲಿನಕೆರೆ ಈ ನಾಲ್ಕು ಗ್ರಾಮಗಳಿಗೆ ನೀರು ಪೂರೈಕೆಗಾಗಿ ಅನುಕ್ರಮವಾಗಿ ರೂ. ೨೪.೨೭ ಲಕ್ಷ, ರೂ.೧೫.೫೧ ಲಕ್ಷ, ರೂ.೯.೭೦ ಲಕ್ಷ ಮತ್ತು ರೂ.೨೧.೮೫ ಲಕ್ಷ ಮೊತ್ತದ ಅಂದಾಜುಪಟ್ಟಿಯನ್ನು ತಯಾರಿಸಲಾಗುದ್ದು ಸದರಿ ಅಂದಾಜುಪಟ್ಟಿಗಳು ತಾಂತ್ರಿಕ ಪರಿಶೀಲನೆಯಲಿವೆ.

ಹೂವಿನ ಹಡಗಲಿ ತಾಲ್ಲೂಕಿನಲ್ಲಿ ಹೊಸ ಪ್ರೌಢಶಾಲೆ ಪ್ರಾರಂಭಿಸುವುದು

2540(3339) ಶ್ರೀ ಹಾಲಪ್ಪ ವಿ.ಬಿ. (ಹಡಗಲಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹೂವಿನ ಹಡಗಲಿ ತಾಲ್ಲೂಕಿನಲ್ಲಿ ಉರ್ದು ಬಾಲಕಿಯರ ಪ್ರೌಢಶಾಲೆಗಳನ್ನು ಇದೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಕೋರಿ ಬಂದ ಪ್ರಸ್ತಾವನೆಗಳು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದಲ್ಲಿ, ಅವು ಯಾವುವು?

ಆ) ಎಷ್ಟು ಗ್ರಾಮಗಳಿಗೆ ನೂತನ ಪ್ರೌಢಶಾಲೆಗಳನ್ನು ತೆರೆಯಲು ಇಚ್ಛಿಸಲಾಗಿದೆ? ಅವುಗಳು ಯಾವುವು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಬಂದಿಲ್ಲ.

ಆ) ಸರ್ಕಾರಿ ಆದೇಶ ಸಂಖ್ಯೆ : ಇಡಿ 67 ಎಸ್.ಇ.ಎಸ್. 2001 ದಿ: 10.7.2001ರಲ್ಲಿ ಪಶ್ಚಿಮಕಾಲ್ದಿ ಮತ್ತು ನಂದೇಹಳ್ಳಿ ಗ್ರಾಮಗಳಿಗೆ ಹೊಸದಾಗಿ ತೆರೆಯಲು ಅನುಮತಿ ನೀಡಲಾಗಿದೆ.